




# ಉಪ್ಪುಂದ ಸಂರಕ್ಷಿತ ಸಮುದ್ರ ಪ್ರಬೇಧಗಳ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ

July 23, 2025 39 No Comment

Search

Search

## Recent Posts

**ಮೂಡುಬಿದಿರೆ: ವಿಶ್ವ ತುಳುವೆರ್ ಸಂಘಟನೆ ಮಂಗಳೂರು ವತಿಯಿಂದ ಆಟಿ ಅಮಾವಾಸ್ಯೆ ಪ್ರಯುಕ್ತ ಕಷಾಯ ಮತ್ತು ಮೆಂತ್ಯೆ ಗಂಜಿ ವಿತರಣೆ**

ಬೈಂದೂರು: ಬಂಟರ ಯಾನೆ ನಾಡವರ ಸಂಘದ 30ರ ಸಂಭ್ರಮದ ಹಾಗೂ ಆಮಂತ್ರಣ ಪತ್ರಿಕೆ ಬಿಡುಗಡೆ

ಮೂಡುಬಿದಿರೆ: ದ. ಕ. ಜಿಲ್ಲಾ ಪದವಿ ಪೂರ್ವ ಗಣಿತ ಉಪನ್ಯಾಸಕರ ಕಾರ್ಯಾಗಾರ

ಚೊಕ್ಕಾಡಿ ಪ್ರೌಢಶಾಲೆ ಕುಕ್ಕುಜಡ್ಕದಲ್ಲಿ




ಬೈಂದೂರು; ಯಶಸ್ವಿ ಫಿಶ್ ಮಿಲ್ ಮತ್ತು ಆಯಿಲ್ ಕಂಪೆನಿ, ಮಂಗಳೂರು ಐಸಿಎಆರ್-ಕೇಂದ್ರ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆ ಪ್ರಾದೇಶಿಕ ಕೇಂದ್ರ, ಮೀನುಗಾರಿಕಾ ಇಲಾಖೆ – ಕರ್ನಾಟಕ ಸರ್ಕಾರ, ಸ್ಮಾಲ್ ಪೆಲಾಜಿಕ್ ಪರ್ಸಿನ್ ಫಿಷರೀಸ್ – ಕರ್ನಾಟಕ ಸ್ಟೇಟ್ FIP, ಆಳ ಸಮುದ್ರ ತಾಂಡೇಲರ ಸಂಘದ ವತಿಯಿಂದ ಅಳಿವಿನಂಚಿನಲ್ಲಿರುವ, ಅಪಾಯವನ್ನೆದುರಿಸುತ್ತಿರುವ, ಮತ್ತು ಸಂರಕ್ಷಿತ (ETP) ಸಮುದ್ರ ಪ್ರಭೇಧಗಳ ಸಂರಕ್ಷಣೆಯ ಕುರಿತು ಜಾಗೃತಿ ಮಾಹಿತಿ ಕಾರ್ಯಾಗಾರ ಉಪ್ಪುಂದ ಪರಿಚಯ ದೇವಕಿ ಬಿ.ಆರ್.ಸಂಭಾಂಗಣದಲ್ಲಿ ಜು. 23ರಂದು ನಡೆಯಿತು.

## Recent Comments

No comments to show.

## Archives

- July 2025
- June 2025
- May 2025
- April 2025
- March 2025
- February 2025
- January 2025
- December 2024
- November 2024
- October 2024
- September 2024
- August 2024
- July 2024
- June 2024
- May 2024




ಪ್ರಧಾನ ವಿಜ್ಞಾನಿ ಡಾ. ಕೆ. ಎಮ್. ರಾಜೇಶ್ ಪ್ರಾಸ್ತಾವಿಸಿ ನಮ್ಮ ಸಾಗರಗಳ ಭವಿಷ್ಯವು ಸಂರಕ್ಷಣೆ ಒಂದು ಆಯ್ಕೆಯಲ್ಲ ಹೊಣೆಗಾರಿಕೆ ಎಂಬುದನ್ನು ಅರಿತುಕೊಳ್ಳಬೇಕು. ಅಳಿವಿನಂಚಿನಲ್ಲಿರುವ, ಅಪಾಯವನ್ನೆದುರಿಸುತ್ತಿರುವ, ಮತ್ತು ಸಂರಕ್ಷಿತ (ETP) ಸಮುದ್ರ ಪ್ರಭೇಧಗಳ ಸಂರಕ್ಷಣೆಯನ್ನು ಉತ್ತೇಜಿಸಲು ಆಯೋಜಿಸಲಾಗಿರುವ ಜಾಗೃತಿ ಕಾರ್ಯಕ್ರಮ ಸಾಗರದ ಜೀವವೈವಿಧ್ಯತೆಯನ್ನು ರಕ್ಷಿಸುವ ಈ ಸುಸಂಕಲ್ಪಿತ ಪ್ರಯತ್ನದಲ್ಲಿ ಬೋಟಿನ ಚಾಲಕರ ಹಾಗೂ ಮೀನುಗಾರರ ಸಹಭಾಗಿತ್ವ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

- December 2023
- November 2023
- October 2023
- September 2023
- August 2023
- July 2023
- June 2023
- May 2023
- April 2023
- March 2023
- February 2023
- January 2023
- December 2022
- November 2022
- October 2022
- September 2022
- August 2022
- July 2022
- June 2022
- December 2021

ಅಳಿವಿನಂಚಿನಲ್ಲಿರುವ, ಅಪಾಯವನ್ನೆದುರುಸುತ್ತಿರುವ, ಸಂರಕ್ಷಿತ ಹಾಗೂ ಸಂರಕ್ಷಣೆಯ ಅಗತ್ಯವಿರುವ ಸಮುದ್ರ ಜೀವಿಗಳ ಕುರಿತು ಜಾಗೃತಿ ಮೂಡಿಸಿದರು.




- July 2021
- June 2021

## Categories

- aluru
- Architecture
- belagavi
- benagaluru
- deralakatte
- dubai
- Entertainment
- Food
- Fresh News
- Gadgets
- Games
- Gurupura
- HASANA
- Health
- kadaba
- karavali

ಮುಖಪುಟ ಕರಾವಳಿ ರಾಜ್ಯ ರಾಷ್ಟ್ರೀಯ ಗಲ್ಫ್ ವಿಶ್ವ ರಾಜಕೀಯ ಕ್ರೀಡೆ ದೈವ ದೇವರು ಮನರಂಜನೆ
ಶೈಕ್ಷಣಿಕ ಕ್ರೈಮ್

ನಿರ್ವಹಣೆಯ ಬಗ್ಗೆ ಮಾಹಿತಿ ನೀಡಿದರು.

ಅರಣ್ಯ ಇಲಾಖೆಯ ಆರ್.ಎಫ್.ಓ. ರಾಘವೇಂದ್ರ ಭಾರತೀಯ ವನ್ಯಜೀವಿಗಳ ಕಾಯಿದೆ, 1972ರ ಅಡಿಯಲ್ಲಿ ಸಂರಕ್ಷಿಸಲ್ಪಡುವ ಸಮುದ್ರ ಜೀವಿಗಳ ಹಿಡಿಯುವುದರ ಪರಿಣಾಮಗಳು, ಕಾಯಿದೆಯ ಉಲ್ಲಂಘನೆ ಮತ್ತು ದಂಡಗಳ ಬಗ್ಗೆ ಮಾಹಿತಿ ನೀಡಿದರು.

ಮಂಗಳೂರು ಮೀನುಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕಿ ಆಶಾಲತಾ ಸುಸ್ಥಿರ ಸಮುದ್ರ ಮೀನುಗಾರಿಕೆ ಮತ್ತು ಅಳಿವಿನಂಚಿನಲ್ಲಿರುವ, ಅಪಾಯವನ್ನೆದುರುಸುತ್ತಿರುವ, ಸಂರಕ್ಷಿತ ಪ್ರಭೇದಗಳ ಸಂರಕ್ಷಣೆಯಲ್ಲಿ ಮೀನುಗಾರಿಕೆ ಇಲಾಖೆಯ ಪಾತ್ರದ ಕುರಿತು ತಿಳಿಸಿದರು.

ಈ ಸಂದರ್ಭದಲ್ಲಿ, ಯಶಸ್ವಿ ಫಿಶ್ ಮಿಲ್ ಮತ್ತು ಆಯಿಲ್ ಕಂಪೆನಿ ಮ್ಯಾನೇಜಿಂಗ್ ಡೈರೆಕ್ಟರ್ ಉದಯ ಕುಮಾರ್ ಸಾಲಿಯಾನ್, ಆಳ ಸಮುದ್ರ ತಾಂಡೇಲರ ಸಂಘದ ಅಧ್ಯಕ್ಷ ರವಿರಾಜ್ ಸುವರ್ಣ, ಬೈಂದೂರು ಘಟಕದ ಅಧ್ಯಕ್ಷ ಸಂತೋಷ ಖಾರ್ವಿ ಉಪಸ್ಥಿತರಿದ್ದರು.

TAGS: #mangalore #udupi V4News

Share Tweet Pin Share

‹ Previous
**ಮೂಡುಬಿದಿರೆ: ಕಾಲೇಜು ವಿದ್ಯಾರ್ಥಿ ಆತ್ಮಹತ್ಯೆ**

- Lifestyle
- mangaluru
- manipal
- Manjeshwara
- moodabidre
- mumbai
- padubidri
- Puttur
- rajastana
- reralakatte
- Robotics
- shivamogga
- shrinivas college mukka
- swasthika
- Technology
- Travel
- udupi
- Ujjire
- ullala
- Uncategorized

ಸಂಭ್ರಮ

RELATED POSTS



### ಬಡಗುತಿಟ್ಟಿನ ಯಕ್ಷಗಾನದ ಪ್ರಸಿದ್ಧ ಭಾಗವತ ಸುಬ್ರಹ್ಮಣ್ಯ ಧಾರೇಶ್ವರ ನಿಧನ

By **V4team** | April 25, 2024



### ಬಡಕುಟುಂಬದ ಹೆಣ್ಣು ಮಗಳಿಗೆ ಮದುವೆ ಮಾಡಿಸುವ ಮೂಲಕ ಮಾದರಿಯಾದ ತಿರುವೈಲು ಕಾರ್ಪೋರೇಟರ್ ಹೇಮಲತಾ ರಘು ಸಾಲ್ಯಾನ್

By **V4team** |

January 28, 2023



### ಕದ್ರಿ ದೇವಾಲಯಕ್ಕೆ ನುಗ್ಗಲೆತ್ನಿಸಿದ ಅಪರಿಚಿತ ಯುವಕರು : ಪೊಲೀಸರಿಂದ ತೀವ್ರ ವಿಚಾರಣೆ

By **V4team** | May 12, 2023

- ಉಡುಪಿ
- ಉಳ್ಳಾಳ
- ಎಸ್.ಡಿ.ಎಂ
- ಕರಾವಳಿ
- ಕಾಸರಗೋಡು
- ಕ್ರೀಡೆ
- ಕ್ರೈಮ್
- ಗಲ್ಫ್
- ದೇರಳಕಟ್ಟೆ
- ದೈವ ದೇವರು
- ಪುತ್ತೂರು
- ಬಂಟ್ವಾಳ
- ಬೆಳ್ತಂಗಡಿ
- ಮಂಗಳೂರು
- ಮನರಂಜನೆ
- ಮೂಡಬಿದರೆ
- ರಾಜಕೀಯ
- ರಾಜ್ಯ
- ರಾಷ್ಟ್ರೀಯ
- ವಾಣಿಜ್ಯ

Name *

Email *

Website

Save my name, email, and website in this browser for the next time I comment.


- ಸುರತ್ಕಲ್
- ಸುಳ್ಯ
- ಹಾನಿ


## POPULAR POSTS

FRESH NEWS HEALTH ಉಡುಪಿ ಕರಾವಳಿ

### ವಿಶ್ವ ಮೂತ್ರಪಿಂಡ ದಿನದ ಅಂಗವಾಗಿ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಲ್ಲಿ ಜಾಗೃತಿ ಹಾಗೂ ಶಿಕ್ಷಣ ಕಾರ್ಯಕ್ರಮ

March 9, 2023



FRESH NEWS HEALTH MANIPAL UDUPI ಕರಾವಳಿ

### ವಿಶ್ವ ಆರೋಗ್ಯ ದಿನಾಚರಣೆ : ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದಲ್ಲಿ ಆರೋಗ್ಯ ಜಾಗೃತಿ ಮತ್ತು ಅರಿವು

April 6, 2023

ಶಿಬಿರ

March 9, 2023




**ಉಡುಪಿ ಆದರ್ಶ ಆಸ್ಪತ್ರೆಯಲ್ಲಿ ನಡೆಯಲಿದೆ ಉಚಿತ ಮೂತ್ರಪಿಂಡದ ಖಾಯಿಲೆಗಳ ತಪಾಸಣಾ ಶಿಬಿರ**

March 8, 2023

## TAGS

#accident #ACCIDENT NEWS #atirudra mahayaga #bantwala #belthangadi #belthangady #bjp #byndoor #congress #death news #Election #election 2023 #hasana

#mangaluru #manipal #manjeshwara #moodabidre #mudabidre #mudubidre #nelyadi #padubidre #padubidri #puttur #sdm ujire #shivapadi sri umamaheshwara temple #srinivas university #sulya #surathkal #udupi #ullala #V4 STREAM #v4news #v4news karnataka #v4newskarnataka #v4stream #vitla moodabidre moodbidri sullia V4News



ಮೂಡುಬಿದಿರೆ: ವಿಶ್ವ ತುಳುವೆರ್

July 24, 2025



ಪತನವಾದ ನೇಪಾಳ

January 15, 2023



ಬೈಂದೂರು: ಬಂಟರ ಯಾನೆ

July 24, 2025



ಪರೀಕ್ಷಾ ಮುನ್ನಾ ದಿನವೇ

March 30, 2023



ಮೂಡುಬಿದಿರೆ: ದ. ಕ. ಜಿಲ್ಲಾ

July 24, 2025



ಉಡವೊಂದನ್ನು ಬೇಟೆಯಾಡಿದ

November 15, 2022

Select Category










V4 News Channel and V4news.Com being the most loved News Channel and web of the people in the coastal Karnataka and Gulf countries and worldwide; which is well accepted for its news cast, throwing light over the pressing problems such as health, art, sports related programmes coupled with Entertainment oriented programmes.

9243301874/ 9243306874
newsv4media@gmail.com/ newsv4media8@gmail.com

Copyright © 2021 by V4 NEWS. Proudly powered by Accolade Tech Solutions.

ಕರಾವಳಿ ಮುಂಜಾವು

# ಅಳಿವಿನಂಚಿನಲ್ಲಿರುವ ಮತ್ಸ್ಯ ಪ್ರಬೇಧ ಚಿತ್ರ ಬರಲಿದೆ

# ಅಳಿವಿನಂಚಿನಲ್ಲಿರುವ ಮತ್ಸ್ಯ ಪ್ರಬೇಧಗಳನ್ನು ಸಂರಕ್ಷಿಸಿ: ವಿಜ್ಞಾನಿ ಡಾ. ರಾಜೇಶ ಕೆ.ಎಂ.

**ಕರಾವಳಿ ಮುಂಜಾವು ವರದಿ**



**ಕುಮಟಾ:** 'ಮೀನುಗಾರರು ಮೀನುಗಾರಿಕೆಗೆ ಹೋದ ಸಂದರ್ಭದಲ್ಲಿ ಆಳ ಸಮುದ್ರದಲ್ಲಿ ಅಳಿವಿನಂಚಿನಲ್ಲಿರುವ ಮತ್ಸ್ಯ ಪ್ರಬೇಧಗಳು ಕಂಡುಬಂದಾಗ ಅವುಗಳನ್ನು ಹಿಡಿಯಬಾರದು. ಹಿಡಿದಿದ್ದರೂ ಅವನ್ನು ಸಂರಕ್ಷಿಸಿ ಮರಳಿ ಸಮುದ್ರಕ್ಕೆ ಬಿಡಬೇಕು' ಎಂದು ಕೇಂದ್ರ ಸಾಗರ ಮೀನುಗಾರಿಕೆ ಸಂಶೋಧನಾ ಸಂಸ್ಥೆಯ ಪ್ರಧಾನ ವಿಜ್ಞಾನಿ ಡಾ. ರಾಜೇಶ ಕೆ.ಎಂ. ಮೀನುಗಾರರಿಗೆ ಸಲಹೆ ನೀಡಿದರು.

ಪಟ್ಟಣದ ಮಂದಾರ ಎಲೈಟ್‌ನಲ್ಲಿ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆ, ಮೀನುಗಾರಿಕೆ ಇಲಾಖೆ, ಸ್ಮಾಲ್ ಪೆಲಾಜಿಕ್ ಪರ್ಸಿನ್ ಫಿಶರೀಸ್ ಮತ್ತು ಆಳ ಸಮುದ್ರ ಹಾಂಡೇಲರ ಸಂಘದ ಸಹಯೋಗದಲ್ಲಿ ಮೀನುಗಾರರಿಗಾಗಿ ಆಯೋಜಿಸಿದ ಅಳಿವಿನಂಚಿನಲ್ಲಿರುವ ಸಮುದ್ರದ ಪ್ರಬೇಧಗಳ ಸಂರಕ್ಷಣೆಯ ಕುರಿತಾದ ಜಾಗೃತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ವಿಜ್ಞಾನಿ ಡಾ.ಜಿ.ಬಿ. ಪುರುಷೋತ್ತಮ್ ಮಾತನಾಡಿ, ಶಾರ್ಕ್, ತೊರಕೆ ಮತ್ತು ಪಾಕೋರಿ ಸೇರಿ ವಿವಿಧ ಪ್ರಬೇಧಗಳ ಮೀನುಗಳ ಸಂರಕ್ಷಣೆಯ ಬಗ್ಗೆ ಮೀನುಗಾರರಲ್ಲಿ ಜಾಗೃತಿ ಮೂಡಿಸಿದರು. ಐಸಿಎಆರ್‌ನ ಸುನೀಲ್ ಕುಮಾರ ಇವರ ಅಳಿವಿನ ಅಂಚಿನಲ್ಲಿರುವ ಅಪಾಯವನ್ನು ಎದುರಿಸುತ್ತಿರುವ ಮತ್ತು ಸಂರಕ್ಷಿತ ಮತ್ತು ಸಂರಕ್ಷಣೆಯ ಅಗತ್ಯವಿರುವ ಸಮುದ್ರ ಜೀವಿಗಳ ಬಗ್ಗೆ ಮಾಹಿತಿ ನೀಡಿದರು.

ಕುಮಟಾ ಎಸಿಎಫ್ ಡಾ. ಕೃಷ್ಣೆಗೌಡ ಮಾತನಾಡಿ, ವನ್ಯಜೀವಿ ಕಾಯ್ದೆ 1972ರ ಅಡಿಯಲ್ಲಿರುವ ಸಂರಕ್ಷಿಸಲ್ಪಟ್ಟಿರುವ ಸಮುದ್ರ ಜೀವಿಗಳನ್ನು ಹಿಡಿಯುವುದರ ಪರಿಣಾಮ ಮತ್ತು ಕಾಯ್ದೆಯ ಉಲ್ಲಂಘನೆ, ಶಿಕ್ಷೆ ಮತ್ತು ದಂಡದ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಾಗಾರದಲ್ಲಿ ಕುಮಟಾ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಸಚಿನ್, ಸ್ಮಾಲ್ ಪೆಲಾಜಿಕ್ ಪರ್ಸಿಯನ್ ಫಿಶರೀಸ್ ಉದಯಕುಮಾರ, ಆಳ ಸಮುದ್ರ ಹಾಂಡೇಲರ ಸಂಘದ ರವಿರಾಜ್ ಸುವರ್ಣ ಇವರು ಇದ್ದರು. ವಿವಿಧ ಬೋಟ್‌ಗಳ ಮಾಲೀಕರು, ಮೀನುಗಾರ ಪ್ರಮುಖರು ಈ ಕಾರ್ಯಾಗಾರದಲ್ಲಿ ಪಾಲ್ಗೊಂಡು ಪ್ರಯೋಜನ ಪಡೆದರು.



**ಸಿಕ್ಕ ಮೀನುಗಳ ಮಾಹಿತಿ ದಡಕ್ಕೆ ಬಂದಾಗಲೇ ದೊರೆಯುತ್ತದೆ**

ಆಳ ಸಮುದ್ರ ಸಂಘದ ಮಾಜಿ ಅಧ್ಯಕ್ಷ ಗಣಪತಿ ಹರಿಕಂತ್ರ ಮಾತನಾಡಿ, ನಾವು ಮೀನು ಹಿಡಿಯಲು ಬಲೆ ಹಾಕಿದಾಗ ಅದರಲ್ಲಿ ಯಾವ ಮೀನುಗಳು ಸಿಗುತ್ತವೆ ಎಂಬುದು ತಿಳಿಯುವುದು ಬಲೆಯನ್ನು ದಡಕ್ಕೆ ಎಳೆದು ತಂದಾಗ ಮಾತ್ರ. ಬಲೆ ಎತ್ತಿ ಬೋಟ್‌ನಲ್ಲಿ ಇಳಿಸುವಷ್ಟರಲ್ಲಿ ಆ ಜೀವಿಗಳು ಮೃತಪಟ್ಟಿರುತ್ತವೆ. ಆಗ ಏನು ಮಾಡಬೇಕು. ಅಲ್ಲಿಯೇ ಬಿಸಾಡಿದರೆ ಸಮುದ್ರದಲ್ಲಿ ಮಾಲಿನ್ಯ ಉಂಟಾಗುತ್ತದೆ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಧಿಕಾರಿಗಳು ಸಂರಕ್ಷಿತ ವಿವಿಧ ಪ್ರಬೇಧದ ಮೀನು ಬಲೆಗೆ ಸಿಕ್ಕಿ ಮೃತಪಟ್ಟರೆ ಅದನ್ನು ಮಾರಾಟ ಮಾಡದೇ ದಡಕ್ಕೆ ತಂದು ಅಂತ್ಯ ಕ್ರಿಯೆ ಮಾಡಬೇಕು. ಒಂದು ವೇಳೆ ಬದುಕಿದ್ದರೆ ಮರಳಿ ಸಮುದ್ರಕ್ಕೆ ಬಿಡಿ. ಇಂಥ ಸಂರಕ್ಷಿತ ಪ್ರಬೇಧಗಳನ್ನು ತಿಳಿದು ತಿಳಿದು ಬೇಟೆಯಾಡುವುದು ಕಾನೂನು ರೀತಿಯಲ್ಲಿ ಅಪರಾಧವಾಗಿದೆ. ಅದಷ್ಟು ಇಂಥ ಜೀವಿಗಳನ್ನು ಸಂರಕ್ಷಿಸಲು ಮೀನುಗಾರರು ಸಹಕಾರ ಮಾಡಬೇಕೆಂದು ಕೋರಿದರು.

**ಅಳಿವಿನಂಚಿನಲ್ಲಿರುವ, ಅಪಾಯವನ್ನೆದುರಿಸುತ್ತಿರುವ ಮೀನುಗಳು**

ಮಿತಿಮೀರಿದ ಮೀನುಗಾರಿಕೆಯಿಂದ ಅನೇಕ ಮೀನು ಪ್ರಭೇದಗಳು ಅಳಿವಿನಂಚಿನಲ್ಲಿದ್ದು, ಆವಾಸಸ್ಥಾನ ನಷ್ಟ, ಮಾಲಿನ್ಯ ಮತ್ತು ಹವಾಮಾನ ಬದಲಾವಣೆಯೂ ಕಾರಣ ಎನ್ನಲಾಗಿದೆ. ಅಕ್ರಮ ಮೀನುಗಾರಿಕೆಯಿಂದ ಮೀನುಗಳ ಸಂತತಿಯ ಕುಸಿತಕ್ಕೆ ಕಾರಣವಾಗಿದೆ. ಅಂತರರಾಷ್ಟ್ರೀಯ ಪ್ರಕೃತಿ ಸಂರಕ್ಷಣಾ ಒಕ್ಕೂಟದ ಪ್ರಕಾರ 1616ಕ್ಕೂ ಹೆಚ್ಚು ಅಳಿವಿನಂಚಿನಲ್ಲಿರುವ ಮೀನು ಪ್ರಭೇದಗಳಿವೆ ಎನ್ನಲಾಗಿದೆ. ಅಳಿವಿನಂಚಿನಲ್ಲಿರುವ ಜಾತಿಗಳ ಪಟ್ಟಿಯಲ್ಲಿ ಮುಳ್ಳು ತೊರಕೆ, ಪಾಕೋರಿ, ಗರಗಸ ಮೀನು, ಹಾಟಿ, ಆಮೆ, ಕಡಲ್ ಹಂದಿ, ಕಡಲ್ ರಾಜ, ಕೀರ್ ಹಂದಿ, ಕೋಟುಗಿದೆ ತೊರಕೆ, ಕಿತ್ತಳೆ ರಫಿ, ಚೆಗಾಲದ ಸ್ಕೇಟ್, ಅಟ್ಲಾಂಟಿಕ್ ಹ್ಯಾಲಿಬಟ್, ಅಕಾಡಿಯನ್ ರೆಡ್‌ಫಿಶ್, ಬ್ಲೂಫಿನ್ ಟ್ಯೂನ ಮತ್ತು ಬೆಲುಗಾ ಸ್ಟರ್ಜನ್ ಜಾತಿಯ ಮೀನುಗಳು ಅತಿಯಾದ ಮೀನುಗಾರಿಕೆಗೆ ಹೆಚ್ಚು ಗುರಿಯಾಗುತ್ತಿವೆ. ಮಿತಿಮೀರಿದ ಮೀನುಗಾರಿಕೆಯಿಂದ ಹೆಚ್ಚು ಅಪಾಯದಲ್ಲಿರುವ ಪ್ರಭೇದಗಳೆಂದರೆ ಶಾರ್ಕ್‌ಗಳು, ಬ್ಲೂಫಿನ್ ಟ್ಯೂನ, ಮಾಂಕ್‌ಫಿಶ್ ಮತ್ತು ಅಟ್ಲಾಂಟಿಕ್ ಹಾಲಿಬಟ್. ಸಮುದ್ರಾಹಾರ ಉದ್ಯಮದೊಂದಿಗೆ ಸಾಮಾನ್ಯವಾಗಿ ಸಂಬಂಧವಿಲ್ಲದ ತಿಮಿಂಗಿಲಗಳು ಮತ್ತು ಡಾಲ್ಫಿನ್‌ಗಳಂತಹ ಇತರ ಸಸ್ತನಿಗಳು ಸಹ ಅಪಾಯದಲ್ಲಿವೆ.

## ಅಳಿವಿನಂಚಿನಲ್ಲಿರುವ ಸಮುದ್ರ ಪ್ರಬೇಧಗಳ ಸಂರಕ್ಷಣೆ ಕಾರ್ಯಾಗಾರ

# ಸಾಗರದ ಜೀವವೈವಿಧ್ಯಗಳ ಭವಿಷ್ಯ ಆತಂಕದಲ್ಲಿದೆ

**ಉಪ್ಪುಂದ, ಜು. 23:** ಸಾಗರ ಜೀವಿಗಳ ಸಂರಕ್ಷಣೆ ಒಂದು ಆಯ್ಕೆಯಲ್ಲ, ಹೊಣೆಗಾರಿಕೆಯಾಗಿದೆ. ಸಾಗರದ ಜೀವ ವೈವಿಧ್ಯಗಳ ಭವಿಷ್ಯ ಆತಂಕದಲ್ಲಿದೆ. ಇವುಗಳನ್ನು ರಕ್ಷಿಸುವ ಈ ಪ್ರಯತ್ನದಲ್ಲಿ ಬೋಟ್‌ನ ಚಾಲಕರು, ಮೀನುಗಾರರ ಸಹಭಾಗಿತ್ವ ಮುಖ್ಯವಾಗಿದೆ ಎಂದು ಪ್ರಧಾನ ವಿಜ್ಞಾನಿ ಡಾ। ಕೆ. ಎಂ. ರಾಜೇಶ್ ಹೇಳಿದರು.

ಮಂಗಳೂರು ಐಸಿಎಆರ್-ಕೇಂದ್ರ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆ ಪ್ರಾದೇಶಿಕ ಕೇಂದ್ರ, ಮೀನುಗಾರಿಕಾ ಇಲಾಖೆ ಕರ್ನಾಟಕ ಸರಕಾರ, ಯಶಸ್ವಿ ಫಿಶ್ ಮಿಲ್ ಮತ್ತು ಆಯಿಲ್ ಕಂಪೆನಿ, ಸ್ಮಾಲ್ ಪೆಲಾಜಿಕ್ ಪರ್ಸಿನ್ ಫಿಶರೀಸ್ – ಕರ್ನಾಟಕ ಸ್ಟೇಟ್ ಎಫ್‌ಐಪಿ, ಆಳ ಸಮುದ್ರ ತಾಂಡೇಲರ ಸಂಘದ ವತಿಯಿಂದ ಉಪ್ಪುಂದ ಪರಿಚಯ ಸಭಾಂಗಣದಲ್ಲಿ ಜು. 23ರಂದು ನಡೆದ ಅಳಿವಿನಂಚಿನಲ್ಲಿರುವ, ಅಪಾಯವನ್ನು ಎದುರಿಸುತ್ತಿರುವ ಸಮುದ್ರ ಪ್ರಬೇಧಗಳ ಸಂರಕ್ಷಣೆಯ ಜಾಗೃತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.



### ಮೀನುಗಳು ಅಪಾಯದಲ್ಲಿವೆ

**ವನ್ಯಜೀವಿಗಳ ಕಾಯ್ದೆ 2022ರಲ್ಲಿ 26 ಜಾತಿಯ ಶಾರ್ಕ್, ತೊರಕೆ ಮತ್ತು ಗಿಟಾರ್ ಫಿಶ್‌ಗಳ ಮೀನುಗಾರಿಕೆಯನ್ನು ನಿಷೇಧಿಸಲಾಗಿದೆ. ಚೀನೀ ಪ್ಯಾಡಲ್ ಫಿಶ್ 2022ರಲ್ಲಿ ಅಧಿಕೃತವಾಗಿ ನಶಿಸಿ ಹೋದ ಮೀನು ಎಂದು ಘೋಷಿಸಲಾಗಿದೆ. ಶಾರ್ಕ್, ತೊರಕೆ ಮತ್ತು ಕೈಮೇರಾ ಪ್ರಬೇಧದ ಮೀನುಗಳು ಮೀನುಗಾರಿಕೆಯಿಂದ ಅಪಾಯದಲ್ಲಿದೆ ಎಂದು ಹಿರಿಯ ವಿಜ್ಞಾನಿ ಡಾ। ಜಿ. ಬಿ. ಪುರುಷೋತ್ತಮ ಕಳವಳ ವ್ಯಕ್ತಪಡಿಸಿದರು.**

ಹಿರಿಯ ವಿಜ್ಞಾನಿ ಡಾ। ಜಿ. ಬಿ. ಪುರುಷೋತ್ತಮ ಪ್ರಪಂಚದಲ್ಲಿ 5ರಿಂದ 30 ಮಿಲಿಯನ್ ವಿವಿಧ ಜಾತಿಯ ಪ್ರಾಣಿ, ಕೀಟಗಳು ಮತ್ತು ಸಸ್ಯಗಳಿದ್ದು, 2.15 ಮಿಲಿಯನ್‌ನಷ್ಟು ಹೆಸರಿಸಲಾಗಿದೆ. ಇದರಲ್ಲಿ 1.05 ಮಿಲಿಯನಷ್ಟು ಕೀಟಗಳಿದ್ದು, 0.5 ಮಿಲಿಯನ್‌ನಷ್ಟು ಸಸ್ಯ ಪ್ರಬೇಧಗಳಿವೆ ಎಂದರು.

ಮಂಗಳೂರು ಸುನಿಲ್ ಕುಮಾರ್ ಇತರೆ ಅಳಿವಿನಂಚಿನಲ್ಲಿರುವ ಸಂರಕ್ಷಣೆಯ ಅಗತ್ಯವಿರುವ ಸಮುದ್ರ ಜೀವಿಗಳ ಕುರಿತು ತಿಳಿಸಿದರು.

ಮಂಗಳೂರು ಐ.ಸಿ.ಎ.ಆರ್.ಸಿ.ಎಂ.ಎಫ್.ಆರ್.ಐ. ಪ್ರಧಾನ ವಿಜ್ಞಾನಿ ಡಾ। ಕೆ.ಎಂ. ರಾಜೇಶ್ ಆಕಸ್ಮಿಕವಾಗಿ ದಡಕ್ಕೆ ತೇಲಿ ಬರುವಂತಹ ಸಂರಕ್ಷಿತ ಪ್ರಬೇಧಗಳನ್ನು ಮರಳಿ ಸಮುದ್ರಕ್ಕೆ ಕಳುಹಿಸುವ/ದಫನ ಮಾಡುವ ಬಗ್ಗೆ ಮಾಹಿತಿ ನೀಡಿದರು.

ಅರಣ್ಯ ಇಲಾಖೆಯ ಆರ್.ಎಫ್.ಒ. ರಾಘವೇಂದ್ರ, ಯಶಸ್ವಿ ಫಿಶ್ ಮಿಲ್ ಮತ್ತು ಆಯಿಲ್ ಕಂಪೆನಿ ಮ್ಯಾನೇಜಿಂಗ್ ಡೈರೆಕ್ಟರ್ ಉದಯ ಕುಮಾರ್ ಸಾಲಿಯಾನ್, ಆಳ ಸಮುದ್ರ ತಾಂಡೇಲರ ಸಂಘದ ಅಧ್ಯಕ್ಷ ರವಿರಾಜ್ ಸುವರ್ಣ, ಮೀನುಗಾರಿಕಾ ಇಲಾಖೆ ಸಹಾಯಕ ನಿರ್ದೇಶಕಿ ಆಶಾಲತಾ, ಬೈಂದೂರು ಸಂತೋಷ ಖಾರ್ವಿ ಉಪಸ್ಥಿತರಿದ್ದರು.